# <u>ಮಕ್ಕಳ ಕಲ್ಯಾಣ ಸಮಿತಿ ಸದಸ್ಯತ್ವಕ್ಕಾಗಿ ಸಲ್ಲಿಸಬೇಕಾದ ಅರ್ಜಿ ನಮೂನೆ</u>

| ಸಹಿ ಮಾಡಿದ ನಿಮ್ಮ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಲಗತ್ತಿಸುವುದು |
|---|

**ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಪೋಷಣೆ) ಕಾಯ್ದೆ 2015 ಸೆಕ್ಷನ್ 27 ಹಾಗೂ ಬಾಲನ್ಯಾಯ ಮಾದರಿ ನಿಯಮಗಳು 2016, ನಿಯಮ 15)**

(ಅರ್ಜಿಯನ್ನು ಭರ್ತಿ ಮಾಡುವ ಮೊದಲು ಸೂಚನೆಗಳನ್ನು ಪೂರ್ಣವಾಗಿ ಓದುವುದು)

1. ಹೆಸರು: (ಪೂರ್ಣ ಹೆಸರು)

2. ಜನ್ಮ ದಿನಾಂಕ: (ದಾಖಲೆ ಸಹಿತ)
   ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ, ಅಂದರೆ 15–05–2017ಕ್ಕೆ ಅರ್ಜಿದಾರರಿಗೆ 35 ವರ್ಷ ಪೂರ್ಣಗೊಂಡಿರಬೇಕು.
3. ಅರ್ಜಿ ಸಲ್ಲಿಸಲು ಅರ್ಹತೆ (ದಾಖಲೆಗಳ ಸಹಿತ): ಶಿಕ್ಷಣ/ ಆರೋಗ್ಯ/ ಮಕ್ಕಳ ಕಲ್ಯಾಣ ಚಟುವಟಿಕೆಗಳಲ್ಲಿ, ಮಕ್ಕಳೊಂದಿಗೆ ಕನಿಷ್ಠ ಏಳು ವರ್ಷಗಳು ಕೆಲಸ ಮಾಡಿದ ಅನುಭವ **ಅಥವಾ** ಮಕ್ಕಳ ಮನಃಶಾಸ್ತ್ರ ಅಥವಾ ಮನೋವೈದ್ಯಶಾಸ್ತ್ರ (ಸೈಕಿಯಾಟ್ರಿ) ಅಥವಾ ಸಮಾಜಶಾಸ್ತ್ರ ಅಥವಾ ಸಮಾಜಕಾರ್ಯ ಅಥವಾ ಮಾನವಾಭಿವೃದ್ಧಿ (ಹ್ಯೂಮನ್ ಡೆವಲಪ್‌ಮೆಂಟ್) ಅಥವಾ ಕಾನೂನು, ಯಾವುದಾದರೂ ಒಂದು ವಿಷಯದಲ್ಲಿ **ಪದವಿ** ಹೊಂದಿದ್ದು ವೃತ್ತಿನಿರತರಾಗಿರಬೇಕು ಅಥವಾ ನಿವೃತ್ತ ನ್ಯಾಯಿಕ ಅಧಿಕಾರಿ
4. ಬರೆಯಲು ಹಾಗೂ ಓದಲು ತಿಳಿದಿರುವ ಭಾಷೆಗಳು:
5. ಜಾತಿ:
6. ಲಿಂಗ:
7. ಪೂರ್ಣ ವಿಳಾಸ (ನಿವಾಸ):

| | |
|---|---|
| ಮೊಬೈಲ್ ದೂರವಾಣಿ | |
| ಸ್ಥಿರ ದೂರವಾಣಿ | |
| ಇಮೇಲ್ ವಿಳಾಸ | |

8. ಉದ್ಯೋಗ (ದಾಖಲೆಗಳ ಸಹಿತ)
   ಅ. ಹಾಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ/ಕಛೇರಿ

   ಆ. ಹುದ್ದೆಯ ಪದನಾಮ

   ಇ. ನಿರ್ವಹಿಸುತ್ತಿರುವ ಕಾರ್ಯದ ವಿವರ

9. ಅರ್ಜಿದಾರರು ಈ ಹಿಂದೆ ಮಕ್ಕಳ ಕಲ್ಯಾಣ ಸಮಿತಿ (ಸಿ.ಡಬ್ಲ್ಯು.ಸಿ) ಅಧ್ಯಕ್ಷರು ಅಥವಾ ಸದಸ್ಯರಾಗಿ ಅಥವಾ ಬಾಲ ನ್ಯಾಯ ಮಂಡಲಿ (ಜೆ.ಜೆ.ಬಿ)ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೇನು?

ಹೌದು/ಇಲ್ಲ

ಹೌದಾದಲ್ಲಿ

ಅ. ಅಧ್ಯಕ್ಷರು / ಸದಸ್ಯರಾಗಿ ಕಾರ್ಯನಿರ್ವಹಿಸಿದ ಜಿಲ್ಲೆಗಳ ಹೆಸರು:

ಆ. ಕಾರ್ಯನಿರ್ವಹಿಸಿದ ಅವಧಿ (ವರ್ಷ)

**ಈ ಕೆಳಕಂಡವುಗಳ ಬಗ್ಗೆ ಅರ್ಜಿದಾರರು ಕಡ್ಡಾಯವಾಗಿ ಪ್ರತ್ಯೇಕವಾಗಿ ಸ್ವಯಂ ಘೋಷಣೆಯನ್ನು ಅರ್ಜಿಯೊಂದಿಗೆ ನೀಡತಕ್ಕದ್ದು:**

1. ಬಾಲನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ 2015 ಮತ್ತು ಕಾಯ್ದೆಯ ನಿಯಮಗಳಿಗೆ ಬದ್ಧನಾಗಿರುವುದರ ಕುರಿತು.
2. ಕಾರ್ಯಾವಧಿಯಲ್ಲಿ ಯಾವುದೇ ಮಕ್ಕಳ ಪಾಲನಾ ಸಂಸ್ಥೆಗಳೊಂದಿಗೆ (ಸಿ.ಸಿ.ಐ) ಪ್ರತ್ಯಕ್ಷವಾಗಿ/ಪರೋಕ್ಷವಾಗಿ ಯಾವುದೇ ಸಂಬಂಧವನ್ನು ಹೊಂದಿರುವುದಿಲ್ಲ ಮತ್ತು ಅವರೊಂದಿಗೆ ನಿಯಮಗಳ ವಿರುದ್ಧವಾಗಿ ಸಂಯೋಜಿಸದಿರುವ ಕುರಿತು.
3. ಕಾರ್ಯಾವಧಿಯಲ್ಲಿ ಯಾವುದೇ ರಾಜಕೀಯ ಪಕ್ಷದಲ್ಲಿ ಸದಸ್ಯತ್ವ/ಕಾರ್ಯಾಭಾರವನ್ನು ಹೊಂದಿರದಿರುವ ಕುರಿತು.
4. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಾಲ ಕಾಲಕ್ಕೆ ನಿಮ್ಮನ್ನು ನಿಯೋಜಿಸುವ ತರಬೇತಿಗಳಿಗೆ/ಕಾರ್ಯಗಾರಗಳಿಗೆ ತಪ್ಪದೇ ಹಾಜರಾಗುವ ಕುರಿತು.
5. ಯಾವುದೇ ಕ್ರಿಮಿನಲ್ ಮೊಕದ್ದಮೆ ದಾಖಲಾಗದಿರುವ ಬಗ್ಗೆ ಅಥವಾ ವಿಚಾರಣೆಗೆ ಬಾಕಿ ಇಲ್ಲದಿರುವ ಬಗ್ಗೆ ಅಥವಾ ಯಾವುದೇ ಕ್ರಿಮಿನಲ್ ಮೊಕದ್ದಮೆಯಲ್ಲಿ ಶಿಕ್ಷೆಯಾಗಿಲ್ಲದಿರುವ ಬಗ್ಗೆ ಕಡ್ಡಾಯವಾಗಿ ದೃಢೀಕರಣ
6. ಕೇಂದ್ರ ಸರ್ಕಾರಿ/ ರಾಜ್ಯ ಸರ್ಕಾರಿ/ ನಿಗಮ ಮಂಡಳಿಗಳು ನಡೆಸುವ ಅಥವಾ ಅದರ ಸಾಮ್ಯಕ್ಕೆ ಒಳಪಟ್ಟ ಸೇವೆಯಿಂದ ಅರ್ಜಿದಾರರನ್ನು ತೆಗೆದಿಲ್ಲದಿರುವ ಬಗ್ಗೆ ಅಥವಾ ವಜಾ ಮಾಡದಿರುವ ಬಗ್ಗೆ ದೃಢೀಕರಣ
7. ಮಕ್ಕಳ ಶೋಷಣೆ, ಮಕ್ಕಳಿಂದ ದುಡಿಮೆ ಅಥವಾ ಮಕ್ಕಳ ಮತ್ತು ಮಾನವ ಹಕ್ಕುಗಳ ಉಲ್ಲಂಘನೆ, ಅನೈತಿಕ ಚಟುವಟಿಕೆಗಳಲ್ಲಿ ಅರ್ಜಿದಾರರು ತೊಡಗಿಸಿಕೊಂಡಿಲ್ಲದಿರುವ ಬಗ್ಗೆ ದೃಢೀಕರಣ

ಅರ್ಜಿದಾರರ ಸಹಿ

(ಹೆಸರು)

ದೃಢೀಕರಣ

1) ನಾನು --------- ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ, ನಾನು ಮಾನಸಿಕವಾಗಿ ಸದೃಢನಾಗಿದ್ದು, ಅರ್ಜಿಯಲ್ಲಿ ನಮೂದಿಸಿದ ಎಲ್ಲಾ ಮಾಹಿತಿಗಳು ಸರಿಯಾಗಿವೆ ಎಂದು ದೃಢೀಕರಿಸುತ್ತೇನೆ ಹಾಗೂ ಒಂದು ವೇಳೆ ಯಾವುದೇ ವಿವರಗಳು ತಪ್ಪು ಎಂದು ಕಂಡುಬಂದಲ್ಲಿ ಪ್ರಾಧಿಕಾರವು ಸೂಚನೆಯನ್ನು ನೀಡದೇ ಕಾನೂನು ರೀತಿ ಕ್ರಮಕೈಗೊಳ್ಳಬಹುದಾಗಿದೆ.

ಅಭ್ಯರ್ಥಿಯ ಸಹಿ

## ಅರ್ಜಿದಾರರಿಗೆ ಸೂಚನೆಗಳು:

1. ಅರ್ಜಿಯನ್ನು ಕನ್ನಡ ಅಥವಾ ಇಂಗ್ಲೀಷನಲ್ಲಿ ಸಲ್ಲಿಸಬಹುದು, ಅರ್ಜಿಯಲ್ಲಿ ಪೂರ್ಣ ಹೆಸರನ್ನು ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಸ್ಪಷ್ಟವಾಗಿ ಬರೆಯುವುದು, ಆಂಗ್ಲ ಭಾಷೆಯಲ್ಲಿ ಬರೆಯುವಾಗ ಹೆಸರು ಮತ್ತು ವಿಳಾಸವನ್ನು ತಪ್ಪದೆ CAPITAL LETTERS ನಲ್ಲಿ ಬರೆಯುವುದು.
2. ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕ, ಅಂದರೆ 15–05–2017ಕ್ಕೆ ಅರ್ಜಿದಾರರಿಗೆ 35 ವರ್ಷ ಪೂರ್ಣಗೊಂಡಿರಬೇಕು (ದಾಖಲೆಗಳನ್ನು ಒದಗಿಸುವುದು.)
3. ವಿಳಾಸ: ಅಭ್ಯರ್ಥಿಯು ವಾಸವಿರುವ ಪೂರ್ಣ ವಿಳಾಸ ನೀಡುವುದು, ಅಭ್ಯರ್ಥಿಯ ಮೊಬೈಲ್ ದೂರವಾಣಿ, ಸ್ಥಿರ ದೂರವಾಣಿ ಹಾಗೂ ಈ–ಮೇಲ್ ವಿಳಾಸಗಳನ್ನು ಒದಗಿಸುವುದು.
4. ಭರ್ತಿ ಮಾಡಿದ ಅರ್ಜಿಗಳನ್ನು ನೊಂದಾಯಿತ ಅಂಚೆ ಮೂಲಕ ಅಥವಾ ಮುದ್ದಾಂ ದಿನಾಂಕ:15–05–2017 ರಂದು ಸಂಜೆ 5–30ರ ಒಳಗೆ ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಕೇರಾಫ್, ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮೊದಲನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ|| ಬಿ.ಆರ್, ಅಂಬೇಡ್ಕರ್ ವೀಧಿ, ಬೆಂಗಳೂರು – 560001 ಇವರಿಗೆ ಸಲ್ಲಿಸುವುದು.
5. ಅಭ್ಯರ್ಥಿಗಳು, ಸಂದರ್ಶನಕ್ಕೆ ಕರೆದಲ್ಲಿ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗುವುದು.
6. ಅಭ್ಯರ್ಥಿಗಳ ಆಯ್ಕೆಯು ಸರ್ಕಾರದ ಅಂತಿಮ ತೀರ್ಮಾನವಾಗಿರುತ್ತದೆ.
7. ಆಯ್ಕೆಯಾಗುವ ಮಕ್ಕಳ ಕಲ್ಯಾಣ ಸಮಿತಿ ಮತ್ತು ಬಾಲನ್ಯಾಯ ಮಂಡಳಿಯ ಕಾಲಾವಧಿ 3 ವರ್ಷಗಳು ಮಾತ್ರ.

## ಅರ್ಜಿದಾರರಿಗೆ ವಿಶೇಷ ಸೂಚನೆಗಳು

ಈ ಕೆಳಗೆ ನಮೂದಿಸಿದ ಅಂಶಗಳಿಗೆ ಅನ್ವಯಿಸುವಂತಹ ವ್ಯಕ್ತಿಗಳು ಅರ್ಜಿ ಸಲ್ಲಿಸಲು ಅನರ್ಹರು

1. ಈ ಹಿಂದೆ ಅಪರಾಧಿಗಳು ಎಂಬ ದಾಖಲೆ ಇದ್ದಲ್ಲಿ
2. ಮಕ್ಕಳ ಮೇಲಿನ ದೌರ್ಜನ್ಯ, ಮಕ್ಕಳ ಸಾಗಣೆ, ಮಾರಾಟ ಮಕ್ಕಳನ್ನು ಕೆಲಸಕ್ಕೆ ಇಟ್ಟುಕೊಂಡಿದ್ದಲ್ಲಿ, ಮಾನವ ಹಕ್ಕುಗಳು ಮತ್ತು ಮಕ್ಕಳ ಹಕ್ಕುಗಳ ಉಲ್ಲಂಘನೆ ಮಾಡಿದ್ದಲ್ಲಿ ಅಥವಾ ಅನೈತಿಕ ಕಾರ್ಯಗಳಲ್ಲಿ ತೊಡಗಿದ್ದಲ್ಲಿ.
3. ಸಮಿತಿ/ಮಂಡಳಿಯ ಕಾರ್ಯಗಳಿಗೆ ಗಮನ ನೀಡಲು ಅಥವಾ ಸಮಯ ನೀಡಲು ಅವಕಾಶ ನೀಡದಂತಹ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ
4. ಬಾಲನ್ಯಾಯ ಕಾಯ್ದೆ ಹಾಗೂ ನಿಯಮಗಳಲ್ಲಿ ಸೂಚಿಸಿರುವ ವಿದ್ಯಾರ್ಹತೆ ಹಾಗೂ ಅನುಭವಗಳನ್ನು ಪೂರ್ಣಗೊಳಿಸದಿದ್ದಲ್ಲಿ.
5. ಯಾವುದೇ ಮಕ್ಕಳ ಪೋಷಣಾ ಸಂಸ್ಥೆಯ ಕಾರ್ಯಕಾರಿ ಅಥವಾ ಆಡಳಿತ ಅಥವಾ ವ್ಯವಸ್ಥಾಪಕ ಸಮಿತಿ/ಮಂಡಲಿಗಳಲ್ಲಿ ಸದಸ್ಯರಾಗಿದ್ದಲ್ಲಿ.
6. ರಾಜಕೀಯ ಚಟುವಟಿಕೆಯಲ್ಲಿ ಸಕ್ರೀಯವಾಗಿ ಭಾಗಿಯಾಗಿದ್ದಲ್ಲಿ/ಅಧಿಕಾರ ಹೊಂದಿದ್ದಲ್ಲಿ
7. ದಿವಾಳಿ ಎಂದು ಘೋಷಿಸಲ್ಪಟ್ಟಿದ್ದಲ್ಲಿ.